# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಮೂಲತ: ಲೋಕೋಪಯೋಗಿ ಇಲಾಖಾ ಸೇವೆಗೆ ಸೇರಿದ ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ.

**ಓದಲಾಗಿದೆ:-**

1. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಆದೇಶ ಸಂಖ್ಯೆ ಗ್ರಾಅಪ 139 ಸೇಶಿಕಾ 99 ದಿನಾಂಕ 24-05-2008
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ 3544-3546/2012 C/W 209-212/2013 ದಿನಾಂಕ 07-12-2012 ಹಾಗೂ 15-01-2013.
3. ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಲೋಇ 315 ಸೇಸಕಿ 2012 ದಿನಾಂಕ 08-01-2013 ಹಾಗೂ ಸಂಖ್ಯೆ ಲೋಇ 37 ಸೇಸಕಿ 2013 ದಿನಾಂಕ 08-08-2013.
4. ಶ್ರೀ ವಿಜಯಕುಮಾರ್ ಚವಡಣ್ಣನವರ್, ಅಧೀಕ್ಷಕ ಇಂಜಿನಿಯರ್ ಹಾಗೂ ಮತ್ತಿತರರು ಸಲ್ಲಿಸಿರುವ ಮನವಿ ದಿನಾಂಕ 12-08-2013.
5. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 341 ಜಿಪಅ 2012 ದಿನಾಂಕ 07-09-2013.

*****

**ಪ್ರಸ್ತಾವನೆ:**

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 24-05-2008ರ ಸರ್ಕಾರದ ಆದೇಶದಲ್ಲಿ ರಚಿಸಲಾಗಿದೆ. ಈ ನಿಯಮಗಳ ನಿಯಮ 2(2)ರ ಪ್ರಕಾರ, ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಸಹ ಕಾರ್ಯನಿರ್ವಹಿಸುತ್ತಿರುವವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿನ ಸೇವೆಯಲ್ಲಿ ವಿಲೀನಗೊಳ್ಳಲು ಆಸಕ್ತಿ ಹೊಂದಿದಲ್ಲಿ ಅಂತಹವರು 3 ತಿಂಗಳ ಕಾಲಾವಧಿಯೊಳಗೆ ಹಿಂಪಡೆಯಲಾಗದಂತಹ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಅಂತಹವರ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿ ಇಚ್ಛೆಯನ್ನು ವ್ಯಕ್ತಪಡಿಸಿದ ನಂತರ ವಿಲೀನಗೊಂಡ ವ್ಯಕ್ತಿಗಳ ಸೇವಾ ಜೇಷ್ಠತೆಯನ್ನು ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸುವಾಗ ಅವರ ಮಾತೃ ಇಲಾಖೆಯಲ್ಲಿನ ಅಂತರ್ ಜೇಷ್ಠತೆಯಂತೆ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳು 1957ನ್ನು ಅನುಸರಿಸಿ ನಿಗದಿಪಡಿಸಬೇಕಾಗುತ್ತದೆ. ಈ ರೀತಿ ಇಚ್ಛಾ ಪತ್ರವನ್ನು ವ್ಯಕ್ತಪಡಿಸಲು ನಿಗದಿಪಡಿಸಿದ್ದ ಅವಧಿಯು ದಿನಾಂಕ 23-08-2008ಕ್ಕೆ ಅಂತ್ಯಗೊಂಡಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 07-12-2012 ಹಾಗೂ 15-01-2013 ಗಳಂದು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ತೀರ್ಪಿನನ್ವಯ ಮೂಲತ: ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್

ಇಲಾಖೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ.ಎಂ.ನಾಗರಾಜ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಕಾರ್ಯಪಾಲಕ ಇಂಜಿನಿಯರ್, ನಿಯಮ-32 ರನ್ವಯ ಸ್ವತಂತ್ರ ಪ್ರಭಾರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ) ಹಾಗೂ ಶ್ರೀ ಎಸ್.ಉಮೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಬೆಂಗಳೂರು ನಗರ, ಬೆಂಗಳೂರು ಇವರುಗಳ ಸೇವೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ 07-09-2013ರ ಆದೇಶದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ.

ಮುಂದುವರೆದು, ಲೋಕೋಪಯೋಗಿ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 08-08-2013ರ ಅನಧಿಕೃತ ಟಿಪ್ಪಣಿಯಲ್ಲಿ ಶ್ರೀ ವಿಜಯಕುಮಾರ್ ಚವಡಣ್ಣವರ, ಅಧೀಕ್ಷಕ ಇಂಜಿನಿಯರ್ ಹಾಗೂ ಇತರೆ ವೃಂದಗಳ ಒಟ್ಟು 42 ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲು ಲೋಕೋಪಯೋಗಿ ಇಲಾಖೆಯ ಅಭ್ಯಂತರವಿಲ್ಲವೆಂದು ತಿಳಿಸಲಾಗಿದೆ.

ಶ್ರೀ ವಿಜಯಕುಮಾರ್ ಚವಡಣ್ಣವರ, ಅಧೀಕ್ಷಕ ಇಂಜಿನಿಯರ್ ಹಾಗೂ ಮತ್ತಿತರರು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ 12-08-2013ರಂದು ಸಲ್ಲಿಸಿರುವ ಮನವಿಯಲ್ಲಿ ಒಟ್ಟು 42 ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಾತಿ ಪ್ರಕ್ರಿಯೆ ಪೂರ್ಣಗೊಳಿಸಿ ಸ್ಥಳನಿಯುಕ್ತಿ ಆದೇಶ ನೀಡುವಂತೆ ಕೋರಿದ್ದಾರೆ.

ಮೇಲ್ಕಂಡ 42 ಇಂಜಿನಿಯರ್‌ಗಳ ಪೈಕಿ ಶ್ರೀ ಹೆಚ್.ಎನ್.ನಿರಂಜನ, ಕಾರ್ಯಪಾಲಕ ಇಂಜಿನಿಯರ್ ಇವರು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಯಲ್ಲಿಯೇ ಶಾಶ್ವತವಾಗಿ ಸೇವೆ ಸಲ್ಲಿಸಲು ಲೋಕೋಪಯೋಗಿ ಇಲಾಖೆಯನ್ನೇ ಆಯ್ಕೆ ಮಾಡಿಕೊಂಡಿದ್ದು, ಅವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳ್ಳಲು ಈ ಹಿಂದೆ ನೀಡಿದ್ದ ಇಚ್ಛಾ ಪತ್ರವನ್ನು ಪರಿಗಣಿಸಬಾರದೆಂದು ಕೋರಿ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿ ಅವರ ಹೆಸರನ್ನು ಕೈ ಬಿಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ. ಗ್ರಾಅಪ 310 ಜಿಪಅ 2013, ಬೆಂಗಳೂರು, ದಿನಾಂಕ 07-10-2013</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮೂಲತ: ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ವಿವಿಧ ವೃಂದದ 41 (ನಲವತ್ತೊಂದು) ಇಂಜಿನಿಯರ್‌ಗಳ ಸೇವೆಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿದ್ದಂತೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ) ನೇಮಕಾತಿ ನಿಯಮಗಳು 1977ರ ನಿಯಮ 16 (ಎ) (ii) ರನ್ವಯ ವಿಲೀನಗೊಳಿಸಿ ಆದೇಶಿಸಿದೆ. ಈ ವಿಲೀನಾತಿಗೊಂಡ ಅಧಿಕಾರಿಗಳ ಸೇವಾ ಜೇಷ್ಟತೆಯನ್ನು ಲೋಕೋಪಯೋಗಿ ಇಲಾಖೆ ಹೊರಡಿಸಿರುವ ಅಂತರ್ ಜೇಷ್ಟತೆಯನ್ನು ಆಧರಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇವರ ಜೇಷ್ಟತೆಯನ್ನು ನಿಗದಿಪಡಿಸಲಾಗುವುದು.

ಈ ಆದೇಶದಲ್ಲಿ ವಿಲೀನಗೊಂಡಿರುವ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್‌ಗಳನ್ನು ಅವರುಗಳು ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿಯೆ ಮುಂದುವರೆಸಲಾಗಿದೆ. ಉಳಿದಂತೆ ಲೋಕೋಪಯೋಗಿ

----3

ಇಲಾಖೆ / ಇತರೆ ಇಲಾಖೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್‌ಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯಿಂದ ಬಿಡುಗಡೆಗೊಂಡು ಕಾರ್ಯ ವರದಿ ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಅವರ ಮೇಲಾಧಿಕಾರಿಗಳು ಕೂಡಲೇ ಅವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು.

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) / ಸಹಾಯಕ ಇಂಜಿನಿಯರ್ (ವಿಭಾಗ-2) / ಕಿರಿಯ ಇಂಜಿನಿಯರ್‌ಗಳು ಕರ್ತವ್ಯದಿಂದ ಬಿಡುಗಡೆಗೊಂಡ ನಂತರ ಮುಂದಿನ ಸ್ಥಳನಿಯುಕ್ತಿಗಾಗಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇಲ್ಲಿ ಕಾರ್ಯ ವರದಿ ಮಾಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7/10/2013

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, ಅದರ ನೂರು ಪ್ರತಿಗಳನ್ನು ಕಳುಹಿಸುವಂತೆ ಕೋರಿದೆ.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ / ಜಲಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
6. ನಿರ್ದೇಶಕರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಕಾವೇರಿ ಭವನ, ಬೆಂಗಳೂರು.
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
8. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
9. ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ಸರ್ಕಲ್, ಬೆಂಗಳೂರು
10. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಡಿ.ಸಿ.ಎಲ್. ಮಿಲ್ಲರ್ ಟ್ಯಾಂಕ್, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
13. ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ವೃತ್ತ, ಮಂಗಳೂರು.
14. ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು.
15. ಆಯುಕ್ತರು, ಬೆಳಗಾವಿ ಮಹಾನಗರಪಾಲಿಕೆ, ಬೆಳಗಾವಿ.
16. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
17. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
18. ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ.
19. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಇಂಜಿನಿಯರ್‌ಗಳಿಗೆ.
20. ಸಂಬಂಧಪಟ್ಟ ಅಧಿಕಾರಿಗಳಿಗೆ.
21. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ / ಜಲಸಂಪನ್ಮೂಲ ಇಲಾಖೆ / ಸಣ್ಣನೀರಾವರಿ ಇಲಾಖೆ (ಸೇವೆಗಳು-ಎ) / (ಸೇವೆಗಳು-ಸಿ)
22. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
23. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಹೆಚ್ಚುವರಿ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
24. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
25. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.

## ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 310 ಜಿಪಅ 2013 ದಿನಾಂಕ 07-10-2013ಕ್ಕೆ

## ಅನುಬಂಧ

(I) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರು.

| ಕ್ರ.ಸಂ. | ಅಧಿಕಾರಿ / ನೌಕರರ ಹೆಸರು | ವಿಲೀನಗೊಳಿಸಲಾದ ಹುದ್ದೆ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1. | ಶ್ರೀ ಎಸ್.ದೇವರಾಜ್ | ಕಾರ್ಯಪಾಲಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ |
| 2. | ಶ್ರೀ ಕೆ.ಸಿದ್ಧನಗೌಡ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಹಾವೇರಿ |
| 3. | ಶ್ರೀ ಎಂ.ನಾಗರಾಜ್ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೆಂಗಳೂರು ದಕ್ಷಿಣ |
| 4. | ಶ್ರೀ ಶ್ರೀಕಾಂತ ಕಾಮು ನಾಯ್ಕ | ಕಿರಿಯ ಇಂಜಿನಿಯರ್ (ವಿಶೇಷ .ದರ್ಜೆ) [ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-II) ನಿಯಮ-32 ರನ್ವಯ ಸ್ವತಂತ್ರ ಪ್ರಭಾರ] | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಾರವಾರ |
| 5. | ಶ್ರೀ ಎಸ್.ಎ.ಪಾಟೀಲ್ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಸವನಬಾಗೇವಾಡಿ ಬಿಜಾಪುರ ಜಿಲ್ಲೆ |
| 6. | ಶ್ರೀ ಸಂಗಪ್ಪ ಕೆ.ಸಿ. | ಸಹಾಯಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಶಿವಮೊಗ್ಗ |
| 7. | ಶ್ರೀ ಅಮರಪ್ಪ ಎಂ.ಹೊಸಪೇಟೆ | ಸಹಾಯಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ. ಭಟ್ಕಳ |
| 8. | ಶ್ರೀ ಎಸ್.ಕೆಂಪೇಗೌಡ | ಸಹಾಯಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕೇಂದ್ರ ಕಚೇರಿ, ಬೆಂಗಳೂರು |
| 9. | ಶ್ರೀ ನಾರಾಯಣಿ | ಸಹಾಯಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ನೆಲಮಂಗಲ |

| | | | |
|---|---|---|---|
| 10. | ಶ್ರೀ ಮಾಲತೇಶ್ ಪಿ. | ಸಹಾಯಕ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಿರಸಿ |
| 11. | ಶ್ರೀ ಪ್ರೇಮಾನಂದ ವಿಠ್ಠು ನಾಯ್ಕ | ಕಿರಿಯ ಇಂಜಿನಿಯರ್ (ವಿಶೇಷದರ್ಜೆ) | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕುಮಟಾ |
| 12. | ಶ್ರೀ ಸುರೇಶ ಲಕ್ಷ್ಮಣ ನಾಯ್ಕ | ಕಿರಿಯ ಇಂಜಿನಿಯರ್ (ವಿಶೇಷದರ್ಜೆ) | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕುಮಟಾ |
| 13. | ಶ್ರೀ ಪಿ. ಪಾಲ್‌ವಿನ್ಸೆಂಟ್ | ಕಿರಿಯ ಇಂಜಿನಿಯರ್ | ಯೋಜನಾ ಉಪ ವಿಭಾಗ, ಬೆಂಗಳೂರು ನಗರ |
| 14. | ಶ್ರೀ ಸಂಜೀವ್ ಆರ್. ನಾಯ್ಕ | ಕಿರಿಯ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ |
| 15. | ಶ್ರೀ ಸುರೇಶ್ ಗೋವಿಂದ ನಾಯ್ಕ | ಕಿರಿಯ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ |
| 16. | ಶ್ರೀ ರಾಜು ಎನ್. ತಾಂಡೇಲ | ಕಿರಿಯ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಾರವಾರ |
| 17. | ಶ್ರೀ ಎಸ್.ಪಿ.ಪಾಟೀಲ | ಕಿರಿಯ ಇಂಜಿನಿಯರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹುಕ್ಕೇರಿ |

**(II)** **ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು**

| | | | |
|---|---|---|---|
| 18. | ಶ್ರೀ ವಿಜಯಕುಮಾರ್ ಚವಡಣ್ಣನವರ್ | ಅಧೀಕ್ಷಕ ಇಂಜಿನಿಯರ್ | ಪಿ.ಪಿ.ಪಿ. ಸೆಲ್ ರಾಷ್ಟ್ರೀಯ ಹೆದ್ದಾರಿ ವಲಯ, ಬೆಂಗಳೂರು |
| 19. | ಶ್ರೀ ಸಿ.ಕೆ.ಮಲ್ಲಪ್ಪ | ಕಾರ್ಯಪಾಲಕ ಇಂಜಿನಿಯರ್ | ಜಲಸಂಪನ್ಮೂಲ ಇಲಾಖೆ |
| 20. | ಶ್ರೀ ಪರಶುರಾಮ ಅಡಿವೆಪ್ಪ ಭಜಂತ್ರಿ | ಕಾರ್ಯಪಾಲಕ ಇಂಜಿನಿಯರ್ | ಸಿಂಗಟನೂರು ಏತನೀರಾವರಿ ಗದಗ. |
| 21. | ಶ್ರೀ ಶಶಿಧರ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಕೆ.ಆರ್.ಡಿ.ಸಿ.ಎಲ್. ಬೆಂಗಳೂರು |

| | | | |
|---|---|---|---|
| 22. | ಶ್ರೀ ಸಿ.ಎನ್. ಸುಲೇಪೇಟಕರ್ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಕರ್ನಾಟಕ ನೀರಾವರಿ ನಿಗಮ ಉಪ ವಿಭಾಗ ನಂ-5 ಶಿಕಾರಿಪುರ. |
| 23. | ಶ್ರೀ ಆರ್.ಜಿ.ಭಟ್ಟ | ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ)<br>[ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-II), ನಿಯಮ-32 ರನ್ವಯ ಸ್ವತಂತ್ರ ಪ್ರಭಾರ] | ಲೋಕೋಪಯೋಗಿ ಉಪ ವಿಭಾಗ, ಹೊನ್ನಾವರ |
| 24. | ಶ್ರೀ ಟಿ.ಎಸ್.ಲೋಕೇಶ್ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಮಂಗಳೂರು ಮಹಾನಗರ ಪಾಲಿಕೆ ಮಂಗಳೂರು |
| 25. | ಶ್ರೀ ಆರ್.ವಿ.ದೇಶಪಾಂಡೆ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಸರ್ವಶಿಕ್ಷಣ ಅಭಿಯಾನ, ಡಿ.ಡಿ.ಪಿ.ಐ., ಧಾರವಾಡ |
| 26. | ಶ್ರೀ ಎ.ಮಂಜುನಾಥ್ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ತಾಂತ್ರಿಕ ಸಹಾಯಕರು, ಲೋಕೋಪಯೋಗಿ ಇಲಾಖೆ ವೃತ್ತ, ಮಂಗಳೂರು |
| 27. | ಶ್ರೀ ಎಂ.ಜಿ.ಕುಲಕರ್ಣಿ | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | RM.S.A. C.P.I. Office Dharwad |
| 28. | ಶ್ರೀ ಎ.ಜೆ.ಪಾಟೀಲ | ಸಹಾಯಕ ಇಂಜಿನಿಯರ್<br>[ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಿಯಮ-32 ರನ್ವಯ ಸ್ವತಂತ್ರ ಪ್ರಭಾರ] | ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ. |

**(III)** **ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) / ಸಹಾಯಕ ಇಂಜಿನಿಯರ್ (ವಿಭಾಗ-2) / ಕಿರಿಯ ಇಂಜಿನಿಯರ್‌ಗಳು**

| | | | |
|---|---|---|---|
| 29. | ಶ್ರೀ ಎಸ್.ಎನ್. ಮಹೇಶ್ವರಪ್ಪ | ಸಹಾಯಕ ಇಂಜಿನಿಯರ್ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ.) ರಾಜಾಜಿನಗರ ಉಪ ವಿಭಾಗ, ಬೆಂಗಳೂರು -10 |
| 30. | ಶ್ರೀ ಬಿ.ಜಿ.ಭಾಸ್ಕರ್ | ಸಹಾಯಕ ಇಂಜಿನಿಯರ್ | ಲೋಕೋಪಯೋಗಿ ಇಲಾಖೆ, ಸೋಮವಾರಪೇಟೆ |
| 31. | ಶ್ರೀ ಹೆಚ್.ಎಂ.ಲಿಂಗರಾಜ್ | ಸಹಾಯಕ ಇಂಜಿನಿಯರ್ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ.) ಎಸ್.ಡಬ್ಲ್ಯೂ.ಡಿ. ವೆಸ್ಟ್ ಉಪ ವಿಭಾಗ, ಜಯನಗರ ಕಾಂಪ್ಲೆಕ್ಸ್ ಬೆಂಗಳೂರು-10 |

| | | | |
|---|---|---|---|
| 32. | ಶ್ರೀ ಸಂಭಾಜಿ ಶಿವಾಜಿ ಅತ್ತರವಾಲಾ | ಸಹಾಯಕ ಇಂಜಿನಿಯರ್ | ಸಣ್ಣ ನೀರಾವರಿ ಉಪ ವಿಭಾಗ, ರಾಣೆಬೆನ್ನೂರು ಹಾವೇರಿ ಜಿಲ್ಲೆ |
| 33. | ಶ್ರೀ ಗುರುಪಾದಗೌಡ ಬಿ. ಗಿರಡ್ಡಿ | ಸಹಾಯಕ ಇಂಜಿನಿಯರ್ | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ. |
| 34. | ಶ್ರೀ ದೇಶಪಾಂಡೆ ವಿಜೇಂದ್ರ ರಾಘವೇಂದ್ರರಾವ್ | ಸಹಾಯಕ ಇಂಜಿನಿಯರ್ | ಸಣ್ಣ ನೀರಾವರಿ ವಿಭಾಗ, ಧಾರವಾಡ. |
| 35. | ಶ್ರೀ ರಾಮ್‌ದಾಸ್ ಗೋವಿಂದ ಗುನಗಿ | ಕಿರಿಯ ಇಂಜಿನಿಯರ್ (ವಿಶೇಷದರ್ಜೆ) | ಲೋಕೋಪಯೋಗಿ ಉಪ ವಿಭಾಗ, ಅಂಕೋಲಾ |
| 36. | ಶ್ರೀ ರಿಯಾಜ್ ಅಹಮದ್ ದಫೇದಾರ್ | ಕಿರಿಯ ಇಂಜಿನಿಯರ್ (ವಿಶೇಷದರ್ಜೆ) | ಸಣ್ಣ ನೀರಾವರಿ ಉಪ ವಿಭಾಗ, ಧಾರವಾಡ |
| 37. | ಶ್ರೀಮತಿ ಆರ್.ಎ.ಜಕ್ಕಲಿ | ಕಿರಿಯ ಇಂಜಿನಿಯರ್ (ವಿಶೇಷದರ್ಜೆ) | ಸಣ್ಣ ನೀರಾವರಿ ಉಪ ವಿಭಾಗ, ಧಾರವಾಡ |
| 38. | ಶ್ರೀ ರಾಮಕೃಷ್ಣ ಎಸ್. ಜೋಶಿ | ಕಿರಿಯ ಇಂಜಿನಿಯರ್ (ವಿಶೇಷದರ್ಜೆ) | ಸಣ್ಣ ನೀರಾವರಿ ಉಪ ವಿಭಾಗ, ಮಾಗಡಿ |
| 39. | ಶ್ರೀ ಹೆಚ್.ರಂಗನಾಥ್ | ಕಿರಿಯ ಇಂಜಿನಿಯರ್ | ಬಿ.ಬಿ.ಎಂ.ಪಿ. ಬೆಂಗಳೂರು. |
| 40. | ಶ್ರೀ ಎಸ್.ಉಮಾಕಾಂತ | ಕಿರಿಯ ಇಂಜಿನಿಯರ್ | ರಾಷ್ಟ್ರೀಯ ಹೆದ್ದಾರಿ ವಿಭಾಗ, ಕಾರವಾರ |
| 41. | ಶ್ರೀ ಎ.ಡಿ.ಕೊಳಂಬಕರ | ಕಿರಿಯ ಇಂಜಿನಿಯರ್ | ಲೋಕೋಪಯೋಗಿ ಉಪ ವಿಭಾಗ, ಕಾರವಾರ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

7/11/2013